


**ISSN Print:** 2394-7500
**ISSN Online:** 2394-5869
**Impact Factor:** 5.2
IJAR 2015; 1(7): 847-852
www.allresearchjournal.com
Received: 11-04-2015
Accepted: 22-05-2015

**Ramachandra**
ಸಹಾಯಕ ಪ್ರಾಧ್ಯಾಪಕರು,
ಭಂಡಾರ್ಕರ್ಸ್ ಕಾಲೇಜು,
ಕುಂದಾಪುರ, ಕರ್ನಾಟಕ, ಭಾರತ

**Correspondence**
**Ramachandra**
ಸಹಾಯಕ ಪ್ರಾಧ್ಯಾಪಕರು,
ಭಂಡಾರ್ಕರ್ಸ್ ಕಾಲೇಜು,
ಕುಂದಾಪುರ, ಕರ್ನಾಟಕ, ಭಾರತ

# Bhairava Aradhane (Udupi Zilleya Marati Naik Samudhayavannu Anulakshisi

**Ramachandra**

**ಖಟಿಣಡಿಔಜಣಛಿಣುಔಟ**

ಕರ್ನಾಟಕದ ಪಶ್ಚಿಮ ಘಟ್ಟದ ಅರಣ್ಯಗಳು ಹಾಗೂ ಕರಾವಳಿಯ ವೈವಿಧ್ಯಮಯ ಭೂಪ್ರದೇಶದ ಜಿಲ್ಲೆಗಳಲ್ಲಿ ಕಂಡು ಬರುವ ಅನೇಕ ಬುಡಕಟ್ಟುಗಳು ತಮ್ಮದೇ ಆದ ಜೀವನ ಪದ್ಧತಿಯಲ್ಲಿ ಬದುಕುಸಾಗಿಸುತ್ತಿದ್ದಾರೆ. ಈ ಬುಡಕಟ್ಟು ಸಮುದಾಯದಲ್ಲಿಯೇ ಅನಾದಿಕಾಲದಿಂದ ಗುಡ್ಡಕಾಡು ಪರ್ವಗಳಲ್ಲಿ ವಾಸವಿದ್ದ ಮೂಲನಿವಾಸಿಗಳಾದ ಕೊರಗ ಹಾಗೂ ಜೇನುಕುರುಬ (Primitive Tribes) ಒಂದು ರೀತಿಯಾದರೆ ಹಲವಾರು ಕಾರಣಗಳಿಂದ ಬೇರೆ ಬೇರೆ ಪ್ರದೇಶಗಳಿಂದ, ಇತಿಹಾಸದ ಬೇರೆ ಬೇರೆ ಕಾಲಘಟ್ಟದಲ್ಲಿ ಹಂತಹಂತವಾಗಿ ವಲಸೆ ಬಂದು ನೆಲೆನಿಂತ ಸಮುದಾಯಗಳು ಇಲ್ಲಿವೆ. ತಮ್ಮ ಬದುಕು ನಿರ್ವಹಣೆಗಾಗಿ ಆಹಾರ ಸಂಗ್ರಹಣೆ, ಪಶುಪಾಲನೆ, ಬೇಟೆ, ಹೈನುಗಾರಿಕೆ, ಕೂಲಿ, ಕರಕುಶಲತೆ, ಬೇಸಾಯ ಮುಖ್ಯವಾಗಿ ಕುಮೇರಿ(ಕುಂಬ್ರಿ) ಕೃಷಿಇತ್ಯಾದಿ ಮಾರ್ಗಗಳನ್ನು ಆಯ್ಕೆ ಮಾಡಿರುವುದುಕಂಡು ಬರುತ್ತದೆ. ಇಂತಹ ಶ್ರಮ ಸಂಸ್ಕೃತಿಯನ್ನು ಅನುಸರಿಸಿಕೊಂಡು ಬಂದಿರುವ ಬುಡಕಟ್ಟು ಸಮುದಾಯದಲ್ಲಿ "ಮಾರಾಟಿ" ಸಮುದಾಯಗಳು ಒಂದು.

ಶ್ರೇಣಿಕೃತ ಸಾಮಾಜಿಕ ರಚನೆಯುಳ್ಳ ಹಾಗೂ ವರ್ಣವ್ಯವಸ್ಥೆಗೆ ಒಳಪಟ್ಟ ನಾಗರಿಕರೂ, ಸುಶಿಕ್ಷಿತರೂ ಎಂದು ಕರೆಯಲ್ಪಡುವ ಅನೇಕ ನಗರ ಪ್ರದೇಶದಲ್ಲಿ ತಮ್ಮ ವೃತ್ತಿಯೊಂದಿಗೆ ಜೀವನ ಮುಂದುವರಿಸಿಕೊಂಡಿದ್ದರೆ, ಇನ್ನೊಂದೆಡೆಗೆ ನಾಗರಿಕ ಸೌಲಭ್ಯಗಳಿಂದ ದೂರ ಉಳಿದು ಗುಡ್ಡ ಬೆಟ್ಟಗಳ ಅಂಚುಗಳಲ್ಲಿ ನೆಲೆಸಿರುವ ಮರಾಟಿಗರುಯಾವಾಗ, ಯಾವ ಕಾರಣದಿಂದ, ಎಲ್ಲಿಗೆ, ಯಾಕೆ ಬಂದರುಎಂಬುದಕ್ಕೆ ನಿಖರವಾಗಿ ಉತ್ತರ ತಿಳಿದಿಲ್ಲ. ಅವರು ಕರಾವಳಿ ಜಿಲ್ಲೆಗಳಾದ ಕಾಸರಗೋಡು, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ, ಕಾರವಾರ ಹಾಗೂ ಮಲೆನಾಡು ಪ್ರದೇಶದಲ್ಲಿ ನೆಲೆಸಿದ್ದಕ್ಕೆ ಅವರದ್ದೇಯಾದ ಐತಿಹ್ಯ ವಿವರಣೆಗಳು ಇರುವುದಾಗಿದೆ. ಮಹಾರಾಷ್ಟ್ರದ ಶಿವಾಜಿ ಸೈನಿಕರು, ಕೃತಿಯ ವಂಶಸ್ಥರು ತಾವೆಂದು ಹೆಮ್ಮೆಪಟ್ಟುಕೊಳ್ಳುತ್ತಾರೆ. ಶಿವಾಜಿಯ ಸೈನ್ಯದ ಮೇಲೆ ಮುಸ್ಲಿಂಮರ ದಾಳಿಯಿಂದ, ಪ್ರಕೃತಿ ವಿಕೋಪಗಳಿಂದ, ಅಸಹಾಯಕರಾಗಿ ಗೋವಾ ಹಾಗೂ ಕರ್ನಾಟಕದ ಕಾಡುಮೇಡುಗಳ ಮೂಲಕ ಬಂದು ನೆಲೆಸಿರುವುದಾಗಿ ತಿಳಿಸುತ್ತಾರೆ. ಕಾಲಾಂತರದಲ್ಲಿ ಆಧುನಿಕತೆ, ಮೇಲ್ವರ್ಗದಜನರ ಮುಖ್ಯವಾಗಿ ದ್ವಿಜರ ಸಂಸ್ಕೃತಿಯ ಪ್ರಭಾವ, ಪಾಶ್ಚಿಮಾತ್ಯಕರಣ, ಜಾಗತೀಕರಣ, ಪ್ರಕ್ರಿಯೆಗಳ ಪ್ರಭಾವಕ್ಕೆ ಸಿಲುಕಿ ಸ್ಥಿತ್ಯಂತರಗೊಂಡು ಭಿನ್ನ ಭಿನ್ನ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವುದು ಗಮನಕ್ಕೆ ಬರುತ್ತದೆ, ಅಲ್ಲದೆ ವಲಸೆ ಬಂದಿರುವ ಮರಾಟಿ ಬುಡಕಟ್ಟು ಸಮುದಾಯವು ಸ್ಥಳೀಯ ಜೀವನ ಪದ್ಧತಿಗಳ ಪ್ರಭಾವಕ್ಕೆ ಒಳಗಾಗಿರುತ್ತದೆ,

೨೦೦೧ರ ಜನಗಣತಿ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ ಕೊರಗ, ಮಲೆಕುಡಿಯ ಮತ್ತು ಮರಾಟಿ ಸಮುದಾಯವನ್ನು ಒಳಗೊಂಡಂತೆ ಒಟ್ಟು ೬೦೯೩೬ ಆಗಿರುತ್ತದೆ.೨೦೧೧ರ ಜನಸಂಖ್ಯೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ ಪುರುಷರು ೪೦೯೬೧, ಮಹಿಳೆಯರು ೪೧೩೦೭, ಒಟ್ಟು ೮೨೨೬೮ ಆಗಿರುತ್ತದೆ. (ಆಧಾರ: ಜನಗಣತಿ೨೦೦೧ ಮತ್ತು ೨೦೧೧ ಪುಟ ೨೬-೨೭೭) ೨೦೧೧ರ ಜನಸಂಖ್ಯೆಯ ಪ್ರಕಾರ ಉಡುಪಿ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಪುರುಷರು ೨೬೨೨೮ ಮಹಿಳೆಯರು ೨೬೬೬೭ ಒಟ್ಟು ೫೨೮೯೭.

ದಕ್ಷಿಣಕನ್ನಡ, ಉಡುಪಿ, ಕೇರಳರಾಜ್ಯದ ಕಾಸರಗೋಡು ಜಿಲ್ಲೆಯಲ್ಲಿ ಮರಾಟಿಗರೆಲ್ಲರು ನಾಯ್ಕ/ನ್ಯಾಕ ಎಂಬ ಕುಲನಾಮವನ್ನು ಹೊಂದಿದ್ದಾರೆ. ನಾಯ್ಕ/ನಾಯಕ ಎಂಬ ಅಂಕಿತದಿಂದ ಅಂತ್ಯಗೊಳ್ಳುವ ಹೆಸರುಳ್ಳವರೆಲ್ಲಾ ಮರಾಟಿಗರಲ್ಲ. ಈ ನಾಮ ಜಿಲ್ಲೆಯ ಇತರ ಸಮುದಾಯಗಳಾದ ಗೌಡ ಸಾರಸ್ವತ, ಬಂಟ, ಬಿಲ್ಲವ, ರಾಮಕ್ಷತ್ರಿಯ, ಪರಿವಾರ ಬಂಟ, ಖಾರ್ವಿ, ಗಾಳದ ಕೊಂಕಣಿ, ಸಮಗಾರ, ಮಲೆನಾಡಿನಒಕ್ಕಲಿಗ, ಬಯಲು ಸೀಮೆಯ ಲಂಬಾಣಿ, ಬೇಡ, ವಾಲ್ಮೀಕ, ಈಡಿಗ, ಇನ್ನೂ ಅನೇಕ ಸಮುದಾಯಗಳಲ್ಲಿದೆ. ವಾಸ್ತವವಾಗಿ ನಾಯ್ಕ (ನಾಯಕ) ಎಂಬುದು ಗ್ರಾಮದ ಮುಖಂಡನಿಗಿರುವ ಹೆಸರು. ಸೈನಿಕ ವ್ಯವಸ್ಥೆಯಲ್ಲಿ ಜವಾಬ್ದಾರಿಯುತ ಒಂದು ನಿರ್ದಿಷ್ಟ ಹುದ್ದೆ ಅಲ್ಲದೆ. 'ನಾಯಕ' ಎಂಬುದು ಸಂಸ್ಕೃತ ಮೂಲಕ ಪದವಾಗಿದ್ದು.

ಮರಾಟಿಗರು ಮೂಲತಃ ಮಹಾರಾಷ್ಟ್ರ ರಾಜ್ಯದಿಂದ ಬಂದವರು. ಮರಾಠಿಯ ಉಪಭಾಷೆಯನ್ನು ಮಾತನಾಡುವುದರಿಂದ 'ಮಹಾರಾಷ್ಟ್ರ' ಮೂಲ ಎಂದು ಹೇಳಿದರೆ ತಪ್ಪಾಗಲಾರದು. ಶಿವಾಜಿಯ ಅಥವಾ ಪೇಶ್ವೆಗಳ ಸೈನಿಕರಾಗಿಯೂ ಇರಲು ಸಾಧ್ಯವಿದೆ. ಸೇವಾದಳದಲ್ಲಿ ನಾಯ್ಕ (ನಾಯಕ್) ಎನ್ನುವ ಹುದ್ದೆಯಲ್ಲಿ ಮರಾಟಿಗರ ಪೂರ್ವಜರು ಸೇವೆ ಮಾಡುತ್ತಿದ್ದುದರಿಂದ ರೂಢಿಗತವಾಗಿ 'ನಾಯಕರು' ಎಂಬ ಪದ ಹೆಸರಲ್ಲಿ ಸೇರಿರಲು ಸಾಧ್ಯವಿದೆ. ವಲಸೆ ಬಂದ ಕಾಲದಲ್ಲಿ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ತುಳುವರು ಮರಾಟಿಗರ ಮೂಲ ಇತಿಹಾಸ ತಿಳಿದು 'ಮರಾಟಿ ನಾಯ್ಕರು' ಎಂಬ ನಾಮಪದದಿಂದ ಕರೆಯಲು ಸಾಧ್ಯವಿದೆ. ಇವರ ಹೆಸರಿನ ಮುಂದೆ ನಾಯ್ಕ (ನ್ಯಾಕ) ಎಂಬ ಕುಲನಾಮವಿದ್ದು ಅವರನ್ನು 'ಮರಾಟಿ ನಾಯ್ಕ' ಎಂಬ ಜಾತಿ ಸೂಚಕ ಪದವನ್ನು ಬಳಸುತ್ತಾ ಬರಲಾಗಿದೆ. (ಮರಾಟಿಗರನ್ನು ೧೯೫೬ರ ಮೈಸೂರು ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಆದೇಶಿತ ಪಟ್ಟಿಯ III ಭಾಗ VIII ಕ್ರಮಸಂಖ್ಯೆ ೬ ಮತ್ತು ೭ (೪) ಪ್ರಕಾರ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲಾಗಿದೆ.) ಭಾರತದ ಇತರೆ ಬುಡಕಟ್ಟು ಸಮುದಾಯಗಳಂತೆ ಮರಾಟಿ ನಾಯ್ಕರು ಹಳ್ಳಿಗಳಲ್ಲಿ ತಮ್ಮದೇ ಆದ ವಾಸ್ತವ್ಯಗಳನ್ನು ಹೊಂದಿದ್ದು ಒಟ್ಟಾಗಿ ಒಂದೇ ಕಡೆ ವಾಸಿಸುತ್ತಿದ್ದಾರೆ. ಇವರು ಕೊಂಕಣಿ ಮರಾಠಿ ಮಿಶ್ರಿತ ಆಡುಭಾಷೆ ಮಾತನಾಡುತ್ತಾರೆ. ವಿಭಿನ್ನ ನಂಬಿಕೆ ಮತ್ತು ಆಹಾರ ನಿಷೇಧಗಳಿಂದಾಗಿ ಇವರು ಮಾಂಸಹಾರಿಗಳಾಗಿದ್ದಾರೆ.

ಪಿತೃಪ್ರಧಾನ ಅವಿಭಕ್ತ (Patriarchal Joint family) ಮತ್ತು ವಿಸ್ತರಿತ ಕುಟುಂಬ (Extend Family) ಗಳು ಮರಾಟಿ ನಾಯ್ಕರಲ್ಲಿ ಕಾಣುವ ಮುಖ್ಯ ಕುಟುಂಬದ ಪ್ರಕಾರಗಳಾದರೂ ಅವುಗಳು ಇಂದು ಸಣ್ಣ ಅಣು ಕುಟುಂಬಗಳಾಗಿ (Nuclear Family) ಬದಲಾವಣೆಗೊಳ್ಳುತ್ತಿದೆ. ಇವರಲ್ಲಿ ಇಂದಿಗೂ ಅನೇಕ ಪ್ರಾಚೀನ ಹೆಸರುಗಳನ್ನು ಕಾಣಬಹುದು. ಗಂಡಸರಲ್ಲಿ ನಾಯ್ಕ ಹಾಗೂ ಹೆಂಗಸರಲ್ಲಿ 'ಬಾಯಿ' ಎಂಬ ನಾಮಪದದಿಂದ ಕೂಡಿಕೊಂಡಿರುತ್ತದೆ. ಇವರಲ್ಲಿ ಹಲವಾರು 'ಬಳಿ' ಕುಲಗಳಿದ್ದು, ವಿವಾಹವು ಬಳಿಯ ಹೊರಗೆ ನಡೆಯುತ್ತದೆ. ಮರಾಟಿ ನಾಯ್ಕರಲ್ಲಿ ೯೬ ಬಳಿಗಳಿವೆ ಎಂಬ ನಂಬಿಕೆಯಿದೆ. ಎಲ್ಲಾ ಬುಡಕಟ್ಟು ಜನಾಂಗಗಳಲ್ಲಿ ಇರುವಂತೆ ಕುಲ ಲಾಂಛನದ (Totemism) ಲಕ್ಷಣಗಳು ಹೊಂದಿರುತ್ತದೆ. ಮರಾಟಿ ನಾಯ್ಕರ ವಿವಾಹ ಪದ್ಧತಿ ಪ್ರಸ್ತುತ ಹಿಂದೂ ಸಂಪ್ರದಾಯ ರೀತಿಯಲ್ಲೇ ನಡೆಯುತ್ತಿದ್ದಾದರೂ ಅನೇಕ ಪ್ರಾಚೀನ ಬುಡಕಟ್ಟು ಸಂಸ್ಕಾರಗಳು, ವಿಧಿ ವಿಧಾನಗಳು, ರೂಢಿಗಳು, ಸಂಪ್ರದಾಯ ನಂಬಿಕೆಗಳನ್ನು ನಾವು ಕಾಣಬಹುದು. ಇವರಲ್ಲಿ 'ತೆರ' ಎಂದು ಕರೆಯುವ ವಧುದಕ್ಷಿಣೆ ಪದ್ಧತಿಯನ್ನು ಅನುಸರಿಸುತ್ತಾರೆ. ಇತರ ಹಿಂದೂ ಸಮುದಾಯಗಳ ಹಾಗೂ ನೆರೆ ಹೊರೆಯವರ ಪ್ರಭಾವಗಳಿಂದ ವರದಕ್ಷಿಣೆ ಪದ್ದತಿಯೂ ಇವರಲ್ಲಿ ರೂಢಿಯಲ್ಲಿದೆ. ಪಿತೃ ಆರಾಧನೆ, ಭೂತಾರಾಧನೆ, ಸರ್ವಚೇತನವಾದ, ಅಲೌಕಿಕ ಶಕ್ತಿ ಆರಾಧನೆ, ಕುಲದೇವತಾ ಆರಾಧನೆ ಇತ್ಯಾದಿಗಳು ಮರಾಟಿ ನಾಯ್ಕರ ಧರ್ಮದ ಮುಖ್ಯ ಗುಣಲಕ್ಷಣವಾಗಿದೆ.

ಮರಾಟಿ ನಾಯ್ಕ ಹಿಂದೆ ಅನೇಕ ವರ್ಷಗಳ ಕಾಲ ಕುಮೇರಿ ಬೇಸಾಯ (Shifting ultiration) ಮಾಡುತ್ತಾ ಕಾಡಿನಿಂದ ಕಾಡಿಗೆ ತಮ್ಮ ವಸತಿಯನ್ನು ಬದಲಾಯಿಸುತ್ತಿದ್ದರು. ಇದು ಇವರ ಅಲೆಮಾರಿ ಬುಡಕಟ್ಟು ಲಕ್ಷಣವನ್ನು ಸೂಚಿಸುತ್ತದೆ. ಹಾಗಾಗಿ ಮರಾಟಿಗರನ್ನು ಕುಂಬ್ರಿ ಮರಾಠಿಗರು ಎಂದು ಕರೆಯುವ ವಾಡಿಕೆ ಇದೆ. ಸಾಮಾನ್ಯವಾಗಿ ಇವರ ಪುರುಷರು ಬೇಟೆಯಾಡುವುದು ಅಕ್ಕಿ ಮುಡಿ ಕಟ್ಟುವುದು, ಬಾವಿ ತೋಡುವುದು, ಮರ ಕಡಿಯುವುದು, ಕಂಬಳದ ಕೋಣಗಳನ್ನು ಸಾಕುವುದು, ತರಕಾರಿ ಕೃಷಿ, ಕಾಡಿನಿಂದ ಜೇನು ಸಂಗ್ರಹಿಸುವುದು ಹಾಗೆಯೇ ಮಹಿಳೆಯರು ಚಾಪೆ ತಯಾರಿಸುವುದು ಇತ್ಯಾದಿ ಕೆಲಸಗಳನ್ನು ಮಾಡಲು ತನ್ನದೇ ಆದ ದೇಶಿ ಜ್ಞಾನ ಮತ್ತು ನೈಪುಣ್ಯತೆಗಳನ್ನು ಗಳಿಸಿದವರಾಗಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ೧೯೬೧ರಂದು ಭೂಸುಧಾರಣಾ ಕಾಯ್ದೆಯಿಂದಾಗಿ ಗೇಣಿಪದ್ಧತಿಯನ್ನು ಅನುಸರಿಸಿಕೊಂಡು ಹೋಗುತ್ತಿದ್ದ ಅನೇಕ ಮರಾಟಿ ನಾಯ್ಕ ಕುಟುಂಬಗಳಿಗೆ ತಮ್ಮ ಮಾಲೀಕರಿಂದ ಭೂಮಿ ಪಡೆಯಲು ಅನುಕೂಲವಾಯಿತು. ಆದರೆ ಕೆಲವು ಕುಟುಂಬಗಳಿಗೆ ಅತೀ ಕಡಿಮೆ ಭೂಮಿ ಲಭಿಸಿತು. ಇನ್ನು ಕೆಲವು ಕಡೆ ಭೂಮಿ ಸಿಗದೆ ವಿವಾದಗಳು ನಡೆದ ಮತ್ತು ನಡೆಯುತ್ತಿರುವ ಕುರಿತು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಲಾಗಿದೆ. ಅಲ್ಲದೆ ಇವರ ಬಡತನ ಅನಕ್ಷರತೆ, ಅಜ್ಞಾನದಿಂದಾಗಿ ಇನ್ನೂ ಅನೇಕ ಕುಟುಂಬಗಳಿಗೆ ಭೂಸುಧಾರಣ ಯೋಜನೆಯಲ್ಲಿ ಭೂಮಿ ಪಡೆಯಲು ಅಸಾಧ್ಯವಾಯಿತು. ತಮ್ಮ ಭೂಮಾಲಕರೊಂದಿಗೆ ಹೋರಾಟ ಮಾಡಲು ವಿಫಲರಾದವರು ಬೇರೆಡೆ ಹೋಗಿ ಗುಡ್ಡ ಬೆಟ್ಟ ಪ್ರದೇಶದಲ್ಲಿ ನೆಲೆಸಬೇಕಾಯಿತು. ಒಟ್ಟಿನಲ್ಲಿ ಇವರು ಶ್ರಮದಿಂದ ಬದುಕುವ ರಾಜ್ಯದ ಒಂದು ದುರ್ಬಲ ವರ್ಗದ ಜನಾಂಗವೆಂದು ಪರಿಗಣಿಸಬಹುದು. ಈಗಾಗಲೇ ವಿವರಿಸಿದಂತೆ ಇವರು ಆರ್ಥಿಕವಾಗಿ ಶೈಕ್ಷಣಿಕವಾಗಿ ತೀರಾ ಹಿಂದುಳಿದಿದ್ದೂ ಸಾಮಾಜಿಕವಾಗಿ ಕೆಳಮಟ್ಟದಲ್ಲಿದ್ದೂ ಹಾಗೂ ರಾಜಕೀಯವಾಗಿ ಅಸಂಘಟಿತರಾಗಿದ್ದಾರೆ.

### ಭೈರವ ಪದದ ಅರ್ಥ

ಭೈರವ ಎಂಬ ಪದವು ಭೃ (Bhru) ಎಂಬ ಪದದಿಂದ ಹುಟ್ಟಿಕೊಂಡಿದೆ. ಇದರ ಅರ್ಥ ಭಯ (fear) 'ಭೈರವ' ಎಂದರೆ "ಭಯಭೀತ / ಭಯಾನಕ ರೂಪ" ಭೈರವನು ಭಯವನ್ನು ನಾಶ ಮಾಡುವವನು, ಭಯವನ್ನು ನೀಡುವವನು ಹಾಗೂ ಭಯವನ್ನು ಮೀರಿದವನು ಎಂದು ಕರೆಯುತ್ತಾರೆ. ಈತನು ತನ್ನ ಭಕ್ತರನ್ನು ಶತ್ರುಗಳ ಭಾದೆಯಿಂದ ರಕ್ಷಿಸುತ್ತಾನೆ ಮತ್ತು ಮಾನವನ ದುರಾಸೆ, ಕಾಮ ಮತ್ತು ಕೋಪದಿಂದ ರಕ್ಷಣೆಯನ್ನು ನೀಡುತ್ತಾನೆ. ಶತ್ರು, ಕಾಮ, ದುರಾಸೆ, ಕೋಪಗಳು ಮಾನವನ ಬೆಳವಣಿಗೆಗೆ ಅಪಾಯಕಾರಿ. ಏಕೆಂದರೆ ಇವುಗಳ ಆತನನ್ನು ಅಧ್ಯಾತ್ಮ ದತ್ತ ಅಥವಾ ದೇವರನ್ನು ಹುಡುಕಲು ಮನುಷ್ಯರಿಗೆ ಅವಕಾಶವನ್ನು ನೀಡುವುದಿಲ್ಲ.

ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ‘ಭ’ ಎಂದರೆ ಸೃಷ್ಟಿ, ‘ರಾ’ ಎಂದರೆ ಪೋಷಣೆ ‘ವ’ ಎಂದರೆ ನಾಶ. ಒಟ್ಟಿನಲ್ಲಿ ಭೈರವ ಎಂದರೆ ಸೃಷ್ಟಿ, ಸ್ಥಿತಿ, ಲಯಗಳ ಸರ್ವೋಚ್ಚವಾದ ಅಧಿಪತಿ ಎಂದು ಜನಪದರು ಕರೆಯುತ್ತಾರೆ. ಆದ್ದರಿಂದ ಈತನು ಶಿವನ ಒಂದು ಅವತಾರ ರೂಪದ ಭೂತ. (A Manifestation of God Shiva in the form of Bhutha) ಎಂದು ಅರ್ಥವನ್ನು ಹೇಳಿದ್ದಾರೆ. ಕರಾವಳಿ ಪ್ರದೇಶದಲ್ಲಿ ತುಳುವರು ಆರಾಧಿಸುವ ದೈವವಾಗಿ ಭೈರವನು ಕಂಡುಬರುತ್ತಾನೆ. ಆದ್ದರಿಂದ ತುಳು ಜನಪದರು ಭೈರವನ ಆರಾಧನೆಯ ಸಂದರ್ಭದಲ್ಲಿ “ಭೈರವಗ್ ಕರಿಪುನಿ” ಅಂದರೆ ಭೈರವ ಎಂಬ ಭೂತಕ್ಕೆ ಬಲವನ್ನು ಕೊಡುವ ಆಚರಣೆ (A ritual of offering food to Bhairava) ಎಂದು ಹೇಳಲಾಗಿದೆ.

ಶಿವನ ಆರಾಧನೆಯು ಬಹಳ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ. ವೇದಪೂರ್ವ ಯುಗದ ಸಿಂಧೂ ನದಿ ಕಣಿವೆಯ ನಾಗರಿಕತೆಯ ಕಾಲದಲ್ಲಿಯೇ ಶಿವೋಪಾಸನೆ ಇದ್ದಿತೆಂದು ಇತಿಹಾಸಕಾರರು ಅಭಿಪ್ರಾಯ ಪಟ್ಟಿರುತ್ತಾರೆ. ನೇಪಾಳದ ಕಠ್ಮಂಡು ಮತ್ತು ಭಾರತದಲ್ಲಿ ಜನಪದರ ನಂಬಿಕೆ ಭೈರವನು ಒಬ್ಬ ಗ್ರಾಮದೇವತೆ, ಕ್ಷೇತ್ರ ರಕ್ಷಕ, ಸಮೃದ್ಧಿಯ ಪ್ರತೀಕ ಹಾಗೂ ಶಿವನ ಒಂದು ಅಂಶ ಎಂಬುದಾಗಿ ಪ್ರಚಲಿತದಲ್ಲಿರುವ ಜನಪದರ ನಂಬಿಕೆ. ಭೈರವನು ರಾಕ್ಷಸ ಸ್ವಭಾವದವ. ಆತನು ಹುಟ್ಟಿದ ತಕ್ಷಣ ದೇವತೆಗಳನ್ನೆಲ್ಲಾ ಸೃಷ್ಟಿಕರ್ತನಾದ ಶಿವನ ಅನುಮತಿ ಇಲ್ಲದೆ ನಿಗ್ರಹಿಸಿದ. ಇದರಿಂದಾಗಿ ಶಿವನ ಕೋಪ ಮತ್ತು ಶಾಪಕ್ಕೆ ಗುರಿಯಾಗಿ ಆತನನ್ನು ಒಂದು ಮರವಾಗಿ ಪರಿವರ್ತಿಸಿದನು. ಆ ನಂತರ ಶಿವನು ಶಾಂತ ಚಿತ್ತನಾಗಿ ಯಾರು ಈ ಭೈರವ ನನ್ನ ಪೂಜಿಸುತ್ತಾರೋ ಅವರು ಯತೇಚ್ಛವಾಗಿ ಪುರಸ್ಕೃತರಾಗುತ್ತಾರೆ ಎಂದು ತಿಳಿಸಿದನು. ಶಿವನ ಕೋಪಕ್ಕೆ ತುತ್ತಾಗಿ ಮರವಾಗಿದ್ದರಿಂದ ಆ ಮರಕ್ಕೆ ‘ಧಮನಕ’ (ತಾತಿರಿ) ಮರ ಎಂದು ಹೆಸರಾಗಿದೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೇರಳದ ಕಾಸರಗೋಡು ತಾಲೂಕಿನಲ್ಲಿ ಭೈರವನ ಆರಾಧನೆ ಹೆಚ್ಚಾಗಿ ಕಂಡುಬರುತ್ತವೆ. ಭೈರವನ ಬನದಲ್ಲಿ ಹೆಚ್ಚಾಗಿ ಕಾಸರಕ ಮತ್ತು ಹಾಲೆ ಮರಗಳು ಕಂಡುಬರುತ್ತದೆ. ಕಾಸರಕನ ಮತ್ತು (ಪಾಲೇಯ) ಹಾಲೆಯ ಮರಕ್ಕೆ ಕರಾವಳಿ ಪ್ರದೇಶದಲ್ಲಿ ತುಳು ಜನಪದ ಸಂಸ್ಕೃತಿಯಲ್ಲಿ ವಿಶಿಷ್ಟವಾದ ಸ್ಥಾನಮಾನಗಳಿವೆ. ‘ಹಾಲೆ’ ಮರದಲ್ಲಿ ಪ್ರೇತಗಳು ವಾಸಿಸುತ್ತವೆ ಮತ್ತು ಈ ಮರವು ಹಾಲನ್ನು ಒಸರುವ ವೃಕ್ಷವಾಗಿದ್ದರಿಂದ ಇದು ಸಮೃದ್ಧಿಯ ಸೂಚಕವಾಗಿದೆ. ಅದೇ ರೀತಿ ಕಾಸರಕನ ಮರವು ದುಷ್ಟಶಕ್ತಿಗಳನ್ನು ನಿಗ್ರಹಿಸುವ ಮರ ಎಂಬುದಾಗಿ ಜನಪದರಲ್ಲಿ ನಂಬಿಕೆ ಇದೆ. ಆದ್ದರಿಂದಲೇ ಭೈರವನೂ ಕೂಡಾ ದುಷ್ಟ ಶಕ್ತಿಗಳ ನಿಗ್ರಹ ಮತ್ತು ಸಂಮೃದ್ಧಿಯ ಪರಿಕಲ್ಪನೆಯ ಆಶಯವನ್ನು ಪ್ರಕಟಿಸುವ ಒಂದು ದೈವ ಎಂದು ಹೇಳಬಹುದು.

ಡಾ. ಚಿದಾನಂದ ಮೂರ್ತಿಯವರು ತಮ್ಮ ಕರ್ನಾಟಕದಲ್ಲಿ ಭೈರವನ ಆರಾಧನೆಯು ಬಹುಶಃ ಕಾಪಾಲಿಕರಿಂದ ಬಂದಿರಬಹುದು ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಶೈವ ಧರ್ಮದ ಒಂದು ಶಾಖೆ ವಾಮಾಚಾರ ಪದ್ಧತಿಯು ಕಾಪಾಲಿಕರಾಗಿರುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ೭ನೇ ಶತಮಾನದಲ್ಲಿ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ‘ಕಾಪಾಲೇಶ್ವರ’ ದೇವಸ್ಥಾನದಲ್ಲಿ ಕಾಪಾಲಿಕರಿದ್ದು, ಕೃಷ್ಣ ಮಿಶ್ರನ ಪ್ರಭೋದ ಚಂದ್ರೋದಯದ ಕಾಪಾಲಿಕರು ಮಹಾಭೈರವನ ಆರಾಧಕರಾಗಿದ್ದರು. ಆಗ ತಾನೇ ಕಡಿದ ನರಮಂಡಲಗಳ ರಕ್ತದಿಂದ ಭೈರವನನ್ನು ತೃಪ್ತಿ ಪಡಿಸುತ್ತಿದ್ದರು. ಇದರಿಂದ ವ್ಯಕ್ತವಾಗುವುದೇನೆಂದರೆ ಭೈರವನಿಗೆ ಬಲಿ ಪದ್ಧತಿ ಮೂಲಕ ಪೂಜೆ ಸಲ್ಲಿಸುತ್ತಿರುವ ಕ್ರಮ ಕರಾವಳಿಯ ಪ್ರದೇಶದಲ್ಲಿ ಸ್ಪಷ್ಟವಾಗುವುದಲ್ಲದೆ ತುಳುನಾಡಿನ ಬಹುತೇಕ ಗ್ರಾಮಾಂತರ ಪ್ರದೇಶಗಳಲ್ಲಿ ಭೈರವನು ಜನಪದೀಯರ ದೈವವಾಗಿ ಕಂಡುಬರುತ್ತಾನೆ.

**ಭೈರವ ಮತ್ತು ಮಹಮ್ಮಾಯಿಯ ಆರಾಧನೆಗೆ ಸಂಬಂಧಿಸಿದ ಕಥೆ**

ಕುಲ್ವಾಡಿ ಮರಾಟಿಗನಿಗೆ ಭೈರವ ಸಾಕ್ಷಾತ್ಕಾರಗೊಂಡಿರುವ ಕಥೆಯನ್ನು ತಿಳುವಳಿಕೆದಾರರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವ್ಯಕ್ತಪಡಿಸಿದ್ದಾರೆ. ಒಂದಾನೊಂದುಕಾಲದಲ್ಲಿ ಪ್ರಕೃತಿಯ ಮಡಿಲಲ್ಲಿ ಆದಿವಾಸಿಗಳು ವಾಸಿಸುತ್ತಿರುವ ಕಾಡಂಚಿನ ಮಧ್ಯದಲ್ಲಿಒಬ್ಬ ಮರಾಟಿಗತನ್ನ ಸೊಂಟದಿಂದ ಕೆಳಗೆ ಎರಡೂ ಕಾಲುಗಳು ಸ್ವಾಧೀನವಿಲ್ಲದೆ ಬಳಲುತ್ತಿದ್ದನು. ಸೊಂಟದಿಂದ ಮೆಲ್ಭಾಗ ಗಟ್ಟಿಮುಟ್ಟಾಗಿತ್ತು, ನಡೆಯುವುದಕ್ಕೆ ಸಾಧ್ಯವಾಗದೆ ತೆವಳಿಕೊಂಡು ಹೋಗುತ್ತಿದ್ದ. ಇವನಿಗೆ ಹೆಂಡತಿ ಮತ್ತು ಮಕ್ಕಳಿಬ್ಬರಿದ್ದರು. ಈತನಿಗೆ ಬೇಟೆಯಾಡಿ ಪ್ರಾಣಿಪಕ್ಷಿಗಳನ್ನು ಹಿಡಿಯಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಮೀನು ಹಿಡಿಯುವುದಕ್ಕೆ ನದಿ ತೋಡುಗಳಿಗೆ ಹೋಗಲಿಕ್ಕೆ ಆಗುತ್ತಿರಲಿಲ್ಲ ಹಾಗಾಗಿ ಅವನು ಗುಡಿಸಲಿನ ಸುತ್ತ ಕೃಷಿ ಮಾಡಬೆಕೆಂದು ಆಲೋಚಿಸಿ ತೆವಳುತ್ತಾ ಹೋಗಿ ಮಣ್ಣನ್ನು ಅಗೆದು ಭತ್ತ, ರಾಗಿ, ಜೋಳ ಅಲ್ಲದೆಗೆಣಸು, ಮೆಣಸು ಮತ್ತು ತರಕಾರಿಗಳನ್ನು ಬೆಳೆಸುತ್ತಿದ್ದ. ಫಸಲು ಚೆನ್ನಾಗಿ ಬಂದರು ಪ್ರಾಣಿಪಕ್ಷಿಗಳ ಹಾವಳಿಯಿಂದ ಇವನಿಗೆ ತಿನ್ನುವುದಕ್ಕೆ ಮಡದಿ ಮಕ್ಕಳನ್ನು ಸಾಕಾಗುತ್ತಿರಲಿಲ್ಲ. ಹಾಗಾಗಿ ಹೆಂಡತಿ ಮಕ್ಕಳು ಉಪವಾಸವಿದ್ದು ಅಳುತ್ತಿದ್ದರು, ನಿತ್ಯವು ಹತ್ತಿರದಲ್ಲಿದ್ದವರಲ್ಲಿ ಕೇಳುವುದು ಎಷ್ಟು ಸರಿ ಹಾಗಾಗಿ ಈ ಕುಳ್ಳಗಿನ ಮನುಷ್ಯ ದಿನಾ ಬೇಸರದಿಂದ ಏಕಾಂಗಿಯಾಗಿ ಅಳುತ್ತಿದ್ದ.ಈ ಜೀವನ ಸಾಕು ಇನ್ನು ಬದುಕಿ ಪ್ರಯೋಜನವಿಲ್ಲವೆಂದು ಯೋಚಿಸಿ ಒಂದು ದಿನ ಅತ್ಮಹತ್ಯೆಗೆ ಪ್ರಯತ್ನಿಸಿದ. ಅದರೆ ಕಾಲಿಲ್ಲದವನಿಗೆ ನೇಣು ಬಿಗಿದು ಸಾಯುವುದಕ್ಕೆ ಮರ ಹತ್ತಲೂ ಸಾಧ್ಯವಿಲ್ಲ ಹಾಗಾಗಿ ತೆವಳುತ್ತಾ ಮುಂದೆ ಸಾಗಿದಾಗ, ಆ ಗುಡ್ಡದಿಂದ ಕೆಳಗೆ ಒಂದು ಪ್ರಪಾತ ಕಾಣಿಸಿತ್ತು. ಮೇಲಿನಿಂದ ಜಲಧಾರೆ ಕೆಳಗೆ ಧುಮುಕುತ್ತಿತ್ತು. ಅಲ್ಲಿ ಕುಳಿತು ಯೋಚಿಸಿದ ಈಗಲೇ ಇಲ್ಲಿಂದ ಕೆಳಕ್ಕೆ ಧುಮುಕಿ ಪ್ರವಾಹದೊಂದಿಗೆ ಕೆಳಕ್ಕೆ ಬೀಳಬೇಕೆಂದು ಹಾರಿಯೇ ಬಿಟ್ಟ ಆದರೆ ಆಚಾನಕ್ಕಾಗಿ ಕೆಳಗೆ ಬೀಳುವಷ್ಟರಲ್ಲಿ ಒಬ್ಬ ಅಜಾನುಬಾಹುವಾದ ಮಹಾ ತೇಜಸ್ವಿಯಾದ ವ್ಯಕ್ತಿಯ ಕೈಗಳಲ್ಲಿದ್ದ. ಆತನಿಗೆ ಅಶ್ಚರ್ಯ ವಿಸ್ಮಯ ಕುತೂಹಲದಿಂದ ಮಹಾತ್ಮನಲ್ಲಿ ಕೇಳಿದ ಯಾಕೆ ಸ್ವಾಮಿ ನನ್ನನ್ನು ಸಾಯುವುದಕ್ಕೂ ಬಿಡುವುದಿಲ್ಲ. ನನ್ನಂತಹ ನತದೃಷ್ಟರು ಬದುಕಿ ಯಾವ ಪ್ರಯೋಜನವಿಲ್ಲ. ಬದುಕುವುದಕ್ಕೂ ಆಗದ ಈ ವಿಕಲಚೇತನನನ್ನು ರಕ್ಷಣೆ ಮಾಡಿದ. ಉದ್ದೇಶವೇನೆಂದು ಕೇಳಿದಾಗ, ಆ ಮಹಾತ್ಮ ಹೀಗೆ ಹೇಳುತ್ತಾನೆ. ನಿನ್ನ ಏಳಿಗೆಗೆ ನಾನು ಸಹಾಯ ಮಾಡುತ್ತೇನೆ. ನಿನ್ನಕೃಷಿಯನ್ನು ಪ್ರಾಣಿಪಕ್ಷಿಗಳಿಂದ ರಕ್ಷಣೆ ಮಾಡುವುದಕ್ಕೆ ನಾನು ನಿನಗೊಂದು ಉಪಾಯ ಹೇಳುತ್ತೇನೆ. ನೀನು ನಿನ್ನ ಗುಡಿಸಲಿನ ಸುತ್ತ ಕೃಷಿ ಮಾಡಲಿಕ್ಕೆ ಪ್ರಾರಂಭಿಸು ಆಕೃಷಿ ಯಾವುದೇರೀತಿಯಲ್ಲಿ ನಷ್ಟವಾಗದಿರಲೀಎಂದು ನನ್ನನ್ನು ಪ್ರಾರ್ಥಿಸು. ಒಂದು ಭಾರಿಯ ಫಸಲು ನಿನಗೆ ನಷ್ಟವಾಗಿಲ್ಲವೆಂದುಕಂಡು ಬಂದರೆ ಸಮತಟ್ಟವಾದ ಒಂದು ಜಾಗದಲ್ಲಿ ಕಾಸರಕನ ಮರದ ಬುಡದಲ್ಲಿ ಎರಡು ಕಪ್ಪುಕಲ್ಲನ್ನು ತಂದು ಹಾಕು.ಸುತ್ತ ಮುತ್ತಲಿದ್ದ ಬಲ್ಲೆಗಳನ್ನು ಕಡಿದು ನೀರು ಹಾಕಿ ಶುದ್ಧ ಮಾಡಿಇಡು ಆ ಬಳಿಕ ಪಕ್ಕದಲ್ಲಿರುವತೊಡಿಗೆ ಹೋಗಿ ಒಂದು ಕಲ್ಲನ್ನು ತೆಗೆದು ಅದರ ಅಡಿಯಲ್ಲಿರುವ ಹತ್ತು ಕಾಲಿನ

ಪ್ರಾಣಿಏಡಿಯನ್ನು ಹಿಡಿದುತಂದು ಬೆಂಕಿಯಲ್ಲಿ ಸುಟ್ಟು ಮತ್ತು ಹುರುಳಿ ಕೊಡನ್ನು ಬೆಂಕಿಯಲ್ಲಿ ಸುಟ್ಟ ಬಳಿಕ ಕೊಡನ್ನು ಸುಲಿದು ಹುರುಳಿಯನ್ನು ಒಂದುಗೆರಟೆಯಲ್ಲಿ ನೆನೆಹಾಕಿ ಇಡು. ಬೇರೊಂದುಗೆರಟೆಯಲ್ಲಿ ಭತ್ತ ಹಾಕಿ ನೀನು ಯಾವುದಾದರೂ ಒಂದು ಎಣ್ಣೆಯನ್ನು ಹಾಕಿ ದೀಪ ಹಚ್ಚಿಕಲ್ಲಿನ ಬಲಭಾಗದಲ್ಲಿ ಇಡು ಗುಡ್ಡದಲ್ಲಿ ದೊರಕುವ ಕೇಪಳ ಹೂವನ್ನು ದೀಪದ ಬುಡಕ್ಕೆ ಹಾಕಿ ಕೈ ಮುಗಿದ ಬಳಿಕ ಇನ್ನೊಂದುಕಲ್ಲಿನ ಮೇಲೆ ಕೇಪಳ ಹೂವು ಹಾಕಿ ನೀನು ತಯಾರಿಸಿಟ್ಟು ನೆನೆಸಿದ ಹುರುಳಿ ಬೇಜವನ್ನು ಆ ಕಲ್ಲಿಗೆ ಸಮರ್ಪಣೆ ಮಾಡಿಕಲ್ಲಿನ ಮೇಲೆ ಹಾಕು ಆ ಬಳಿಕ ಏಡಿ ಮಾಂಸವನ್ನು ಮೊದಲಿನ ರೀತಿಯಲ್ಲಿಯೇ ಕಲ್ಲಿಗೆ ಸಮರ್ಪಿಸಿ ನೀನೆಗತಿ ನನ್ನನ್ನು ರಕ್ಷಿಸು ಎಂದು ಕೈಮುಗಿ. ಮುಂದೆ ನಿನಗೆ ಒಳಿತಾದಾಗ ಅನುಕೂಲವಾದಾಗ ತಾಳೆ ಮರದಿಂದ ತೆಗೆದ ಅಮೃತ (ಕಳ್ಳು/ಶೇಂದಿ) ಅನ್ನರೊಟ್ಟಿ ಕೋಳಿ ಪಕ್ಷಿಗಳ ರಕ್ತ ಮಾಂಸ ಬೇಯಿಸಿ ಇದೇಕಲ್ಲಿಗೆ ಸಮರ್ಪಣೆ ಮಾಡುಕಾಲಾಂತರದಲ್ಲಿ ನಿನ್ನಜಾತಿ ಭಾಂದವರನ್ನು ರಕ್ಷಿಸುವ ಭೈರವ ಎಂದೂ ಆರಾಧಿಸುತ್ತಾ ಬನ್ನಿ. ನಿಮ್ಮಿಂದ ಪರಿಹರಿಸಲಾಗದ ಕಷ್ಟ ಬಂದಾಗ ನೀವೆಲ್ಲಒಟ್ಟಾಗಿ ಸೇರಿ ನನ್ನನ್ನು ಪ್ರಾರ್ಥಿಸಿದಲ್ಲಿ ನಾನು ಸ್ವತಃ ಬಂದು ನಿಮ್ಮರಕ್ಷಣೆ ಮಾಡುತ್ತೇನೆಎಂದು ಹೇಳಿ ಅದೃಶ್ಯನಾದನು.

- ಇಂದಿಗೂ ಮರಾಟಿ ನಾಯ್ಕರು ಭೈರವ ಆರಾಧನೆಯನ್ನು ತೋಟ ಅಥವಾ ಕಾಡಿನಲ್ಲಿರುವ ಹಾಲು ಬಸರುವ ಮರದ (ಹಾಳೆಮರು) ಬುಡದಲ್ಲಿ ಅಥವಾ ಕಾಸರಕನ ಮರದ ಬುಡದಲ್ಲಿ ಎರಡು ಕಪ್ಪುಕಲ್ಲನ್ನು ಸ್ವಚ್ಛಗೊಳಿಸಿ ಭೈರವನ ಆರಾಧನೆ ಮಾಡುತ್ತಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿದ್ದೇನೆ.
- ಉಡುಪಿ ಜಿಲ್ಲೆಯಲ್ಲಿರುವ ಮರಾಟಿ ನಾಯ್ಕರು ಭೈರವನನ್ನು ಒಳಗಡೆ ಆರಾಧನೆ ಮಾಡುತ್ತಾರೆ. ಅದರೆ ದಕ್ಷಿಣ ಕನ್ನಡ ಮತ್ತು ಕಾಸರಗೊಡು ಜಿಲ್ಲೆಯಲ್ಲಿ ಭೈರವನನ್ನು ತೋಟದಲ್ಲಿ ಅಥವಾ ಮನೆಯ ಹೊರಗಡೆ ಆರಾಧಿಸುತ್ತಿರುವುದು ಕ್ಷೇತ್ರಕಾರ್ಯದಲ್ಲಿ ಅವಲೋಕಿಸಲಾಗಿದೆ.
- ಭೈರವಾರಾಧನೆಯ ಸಂದರ್ಭದಲ್ಲಿ ಗುಡ್ಡದಲ್ಲಿ ಬೆಳೆಯುತ್ತಿರುವ ಕೇಪಳ ಹೂವನ್ನು ಉಪಯೋಗಿಸುವುದು ಕಂಡುಬರುತ್ತದೆ.
- ಪ್ರತ್ಯಕ್ಷವಾಗಿ ಭೈರವನು ನುಡಿದ ಮಾತಿನಂತೆ ಏಡಿಯನ್ನು ಮಾಂಸದ ಬದಲು ಬಲ್ಯಾರು ಎಂಬ ಜಾತಿಯ ಮೀನನ್ನು ಉಪಯೋಗಿಸುತ್ತಾರೆ. ಜೊತೆಗೆ ಬೇಯಿಸಿದ ಹುರುಳಿಯನ್ನು ಭೈರವನ ಆರಾಧನೆಯಲ್ಲಿ ಸಮರ್ಪಿಸುತ್ತಾರೆ. ಭೈರವ ಆರಾಧನೆಯಲ್ಲಿ ತಾಳೆ ಮರ ಅಥವಾ ತೆಂಗಿನ ಮರದಿಂದ ತೆಗೆದ ಶೇಂದಿಯನ್ನು ಮತ್ತು ಮದ್ಯವನ್ನು ಉಪಯೋಗಿಸುವುದು ಕಂಡುಬಂದಿದೆ.

**ಭೂತಾರಾಧನೆಯ ರೂಪದಲ್ಲಿ ಭೈರವನ ಆರಾಧನೆ**

ಡಾ. ಚಿನ್ನಪ್ಪ ಗೌಡ ಅವರ 'ಭೂತಾರಾಧನೆ ಜನಪದೀಯ ಅಧ್ಯಯನ' ಎಂಬ ಗ್ರಂಥದಲ್ಲಿ ಸುಮಾರು ೩೬೦ ಭೂತಗಳ ಹೆಸರುಗಳಿರುವುದನ್ನು ತಿಳಿಸಿರುವರು. ಡಾ. ವಾಮನ ನಂದಾವರ ಇವರು ಹೊಸದಾಗಿ ೦೩ ಭೂತಗಳ, ರಘುನಾಥ ಎಂ. ವರ್ಕಾಡಿಯವರ ಕಡಂಬಾರ ಮಲ್ರಾಯೆ ಕೃತಿಯಲ್ಲಿ ೪೦೭ ಭೂತಗಳ ಹೆಸರುಗಳನ್ನು ದಾಖಲಿಸಿದ್ದಾರೆ. ಹಾಗಾಗಿ ಅವುಗಳೆಲ್ಲ ಒಟ್ಟಿಗೆ ಸೇರಿದಾಗ ಒಟ್ಟು ೪೧೧ ಭೂತಗಳ ಲೆಕ್ಕ ಸಿಗುತ್ತದೆ. ತುಳುನಾಡಿನ ಜನಪದರು ಸಾವಿರದೊಂದು (ಸಾರತ್ತೊಂಜಿ) ಭೂತಗಳನ್ನು ನಂಬಿಕೊಂಡು ಬಂದಿರುವ ಪರಂಪರೆಯವರು ಡಾ. ಲಕ್ಷ್ಮೀ ಜೆ. ಪ್ರಸಾದ್‌ರವರು ತಮ್ಮ ಕೃತಿ ತುಳುನಾಡಿನ ನಾಗಬ್ರಹ್ಮ ಮತ್ತು ಕಂಬಳದಲ್ಲಿ ೧೧೩ ಇತರೆ ಭೂತಗಳ ಹೆಸರುಗಳನ್ನು ಸೇರಿಸಿರುತ್ತಾರೆ. ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಭೂತಗಳ ಹೆಸರುಗಳು ಮತ್ತೆ ಬೆಳಕಿಗೆ ಬಂದಿರುತ್ತದೆ. ಈಗ ಒಟ್ಟಿನಲ್ಲಿ ೫೪೨ ಭೂತಗಳ ಅಸ್ತಿತ್ವದಲ್ಲಿವೆ ಎಂದು ಕಂಡುಬರುತ್ತದೆ. ಅದರಲ್ಲಿ ಭೈರವ ಭೂತವು ಕೂಡಾ ಒಂದು. ಭೈರವನನ್ನು ಜನಪದ ದೇವತೆ ಎಂದೂ ಮದ್ಯ ಮಾಂಸಾಗಳಿಂದ ಆರಾಧನೆಗೊಳ್ಳುವ ದೈವವೆಂದು ತಿಳಿದು ಬರುತ್ತದೆ. ತುಳುನಾಡಿನಲ್ಲಿ ಭೂತಾರಾಧನೆಯ ರೂಪದಲ್ಲಿಯು ಭೈರವನ ಆರಾಧನೆ ನಡೆಯುತ್ತಿರುವುದು ವಿಶೇಷ.

ಕರಾವಳಿ ಕರ್ನಾಟಕದ ಭಾಗದಲ್ಲಿ ಮರಾಟಿಗಳ ಪ್ರಮುಖ ಆರಾಧನೆಗಳಲ್ಲಿ ಒಂದಾದ ಗೊಂದೋಲು ಪೂಜೆಯ ಸಂದರ್ಭದಲ್ಲಿ ಭೈರವನ ಪೂಜೆಯನ್ನು ಪ್ರಾರಂಭದಲ್ಲಿ ಅಸುರಕ್ರಿಯೆಯ ಮೂಲಕ ಆಚರಿಸುತ್ತಿರುವುದು ಕಂಡು ಬರುತ್ತದೆ. ಭೈರವನ ಆರಾಧನೆಯು ಮರಾಟಿ ಸಮುದಾಯಗಳಲ್ಲದೆ ಇತರೆ ಸಮುದಾಯಗಳಾದ ಗೌಡ ಸಾರಸ್ವತ ಬ್ರಾಹ್ಮಣರು, ರಾಜಸ್ವತ ಬ್ರಾಹ್ಮಣರು, ರಾಮಕ್ಷತ್ರಿಯರು, ಜೋಗಿ ಸಮುದಾಯದವರು, ಒಕ್ಕಲಿಗ ಗೌಡರು, ಭೈರರು ಹಾಗೂ ವಲಸೆ ಬಂದಿರುವಂತಹ ಅನೇಕ ಸಮುದಾಯದವರು ಭೈರವನನ್ನು ಆರಾಧಿಸುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿರುತ್ತದೆ.

"ಮಂಗಳೂರು ನಗರ ಭಾಗದಲ್ಲಿ ಕದ್ರಿಯಲ್ಲಿ ಮಂಜುನಾಥ ದೇವಾಲಯದ ಸಮೀಪ ನಾಥ ಸಂಪ್ರದಾಯದ ಜೋಗಿ ಮಠವಿದೆ. ಜೋಗಿ ಸಮುದಾಯದಲ್ಲಿ ಅನೇಕ ಉಪವರ್ಗಗಳಿವೆ. ಡಾ. ಪುರುಷೋತ್ತಮ ಬಿಳಿಮಲೆಯವರು ಸುಮಾರು ೨೦ ಜೋಗಿ ಸಮುದಾಯದ ಪ್ರಭೇದಗಳನ್ನು ಗುರುತಿಸಿ ಪಟ್ಟಿ ಮಾಡಿದ್ದಾರೆ. ಇವರಲ್ಲಿ ಮರಾಟಿ ಜೋಗಿ ಒಂದು ಉಪ ಪಂಗಡವಾಗಿದೆ. ಜೋಗಿ ಸಮುದಾಯದ ಪ್ರಮುಖವಾದ ಆರಾಧ್ಯ ದೈವ ಕಾಳ ಭೈರವ. ನಾಥ ಸಂಪ್ರದಾಯದವರ ಆರಾಧ್ಯ ದೈವ ಕಾಳ ಭೈರವ ಶಿವನನ್ನು ಕಾಳ ಭೈರವನೆಂದು ಆರಾಧಿಸುತ್ತಾರೆ. ಡಾ. ಲಕ್ಷ್ಮೀ ಜಿ. ಪ್ರಸಾದ್ ಅವರ ಕೃತಿಯಾದ ತುಳುನಾಡಿನ ನಾಗಬ್ರಹ್ಮ ಮತ್ತು ಕಂಬಳದಲ್ಲಿ ಭೈರವ ಪದವೇ "ಬ್ರಹ್ಮ" ಆಗಿರುವ ಸಾಧ್ಯತೆ ಇದೆ ಎಂಬುದಾಗಿ ಅಭಿಪ್ರಾಯ ಪಟ್ಟಿರುತ್ತಾರೆ".

ತುಳುನಾಡಿನಲ್ಲಿ ಕಾಳ ಭೈರವ ಎಂಬ ಭೂತಕ್ಕೆ ಆರಾಧನೆ ಕಂಡುಬಂದಿದೆ. ಈತನು ಈಶ್ವರನ ಹಣೆಯಲ್ಲಿ (ಮುಂಡ) ಜನಿಸಿದ ಕಾರಣ ಈತನನ್ನು 'ಮುಂಡದೇರ್ ಕಾಳ ಭೈರವ' ಎಂದು ತುಳು ಪಾಡ್ದನದಲ್ಲಿ ಹೇಳಲಾಗಿದೆ. ಈತನನ್ನೇ ಬಹುಶಃ ಗುಡ್ಡದಯ್ಯ, ಗುಡ್ಡಜ್ಜ, ಗುಡ್ಡದಜ್ಜ ಎಂದೂ ಕರೆಯುತ್ತಾರೆ. ಸಾಮಾನ್ಯವಾಗಿ ನಾಗಾರಾಧನೆ ಇರುವಲ್ಲಿ ನಾಗಕಲ್ಲಿನ ಸಮೀಪದಲ್ಲಿಯೇ ಭೈರವನ ಕಲ್ಲು ಕೂಡಾ ಆರಾಧನೆಗೊಳ್ಳುತ್ತದೆ.

ತುಳು ಪಾಡ್ದನದಲ್ಲಿ ಭೈರವನ ಬಗ್ಗೆ ಮಾಹಿತಿ ಇಲ್ಲವಾದರೂ ನಾಲ್ವರು ಜೋಗಿಗಳ ಜೊತೆಗೆ ಬಂದುದಾಗಿ ತಿಳಿದುಬರುತ್ತದೆ. ಕಾಲಭೈರವ, ಮಾಂಡತ್ತಾಯ ಮುಂಡಿಪಡಿತ್ತಾಯ ದೈವಗಳು ಒಂದೇ ದೈವದ ಬೇರೆ ಬೇರೆ ಹೆಸರುಗಳು ಎಂಬುದಾಗಿ ಡಾ. ಲಕ್ಷ್ಮೀಯವರು ಅಭಿಪ್ರಾಯ ಪಡುತ್ತಾರೆ. ಮುಂಡಿಪಡಿತ್ತಾಯ ಪಾಡ್ದನದಲ್ಲಿ ವೈದ್ಯನಾಥನೆಂಬವನು ಘಟ್ಟದಿಂದ ಕೆಳಗೆ ತುಳುನಾಡಿಗೆ ಇಳಿದು ಬರುತ್ತಾನೆ. ಅವನ ಜೊತೆಗೆ ಕಾಶಿಯಲ್ಲಿ ಕಾಲ ಭೈರವನೆಂದು ಪ್ರಸಿದ್ಧವಾಗಿದ್ದ ಮುಂಡಿಪಡಿತ್ತಾಯ ದೈವವು ಹಿಂಬಾಲಿಸಿ ಬಂತು ಎಂದು ಹೇಳಲಾಗಿದೆ. ಈ ಘಟನೆಯಲ್ಲಿ ವ್ಯಕ್ತವಾಗುವ ತಾತ್ವಿಕ ಅಂಶವೆಂದರೆ ನಾಥ ಸಂಪ್ರದಾಯವು ಹೊರಗಿನಿಂದ ಬಂದಿದ್ದು, ಹೊರಗಿನಿಂದ ಬಂದ ಕಾರಣಕ್ಕೂ

ಏನೋ ಕರಾವಳಿಯ ಭಾಗ ಒಳಗೊಂಡ ತುಳುನಾಡಿನಲ್ಲಿ ಕಾಳ ಭೈರವ ಬಹಳ ಪ್ರಸಿದ್ಧವಾದ ದೈವ. ಕರಾವಳಿಯ ಭಾಗವಾಗಿರುವ ಕೇರಳ ರಾಜ್ಯದ ಕಾಸರಗೋಡು ಮತ್ತು ದಕ್ಷಿಣಕನ್ನಡ ಜಿಲ್ಲೆಯ ಗ್ರಾಮಾಂತರ ಭಾಗವಾಗಿರುವ ಸುಳ್ಯ, ಪುತ್ತೂರು, ಬಂಟ್ವಾಳ, ಉಡುಪಿ ಜಿಲ್ಲೆಯ ಕಾರ್ಕಳ ಮತ್ತು ಉಡುಪಿ ತಾಲೂಕಿನ ಹೆಚ್ಚಿನ ಗ್ರಾಮಗಳಲ್ಲಿ ಭೈರವನಿಗೆ ಕೋಳಿ ಕಡಿದು ಆರಾಧನೆ ಮಾಡುವ ಪದ್ಧತಿ ಇದೆ. ಅಲ್ಲದೆ ಕಾರ್ಕಳ, ಗುರುಪುರ, ಮೂಲ್ಕಿ, ಕುಂದಾಪುರ ಮುಂತಾದ ಪ್ರದೇಶದಲ್ಲಿ ಭೈರವನ ಆರಾಧನೆ ಇದೆ. ಭೈರವ, ಬ್ರಹ್ಮ ಮತ್ತು ಕ್ಷೇತ್ರಪಾಲ ಒಬ್ಬನೇ ಎಂದೂ ಜೈನ ಜಾನಪದ ಹಾಡೊಂದು ಹೇಳುತ್ತದೆ. ಬ್ರಹ್ಮ ಯಕ್ಷನ ಹಾಡಿನಲ್ಲಿ

"ಎಲ್ಲದ್ಯನ ಸ್ತವನಿಧಿ ಬ್ರಹ್ಮರಾಯ
ಪಂಚಭೈರವ ಕ್ಷೇತ್ರಪಾಲರಿಗಾರುತಿ ಬೆಳಗುವೆನೋ
ಗಾದದಂಡ ತ್ರಿಶೂಲ ಕೈಯಲ್ಲಿ ಹಿಡಿದವನು
ತೀರ್ಥಂಕರರಿಗೆ ರಕ್ಷಣೆ ಕೊಡುವವನು
ಭೂತಪಿಶಾಚಿಗಳಿಗೆ ಶಿಕ್ಷೆ ಕೊಡುವವನು
ಪಂಚತತ್ವವ ಪಂಚಭೈರವ ಕ್ಷೇತ್ರ ಪಾಲರಿಗೆ ಆರತಿ ಬೆಳಗುವೆನೋ" ಎಂಬ ಬ್ರಹ್ಮ ಯಕ್ಷನ ಹಾಡಿನಲ್ಲಿ ಬ್ರಹ್ಮರಾಯ, ಭೈರವ, ಕ್ಷೇತ್ರ ಪಾಲರು ಒಂದೇ ದೈವ ಎಂದು ತಿಳಿದು ಬರುತ್ತದೆ.

**ಮರಾಠಿಗರಲ್ಲಿ ಭೈರವ ಆರಾಧನೆಯ ಪ್ರಕಾರಗಳು**

ಮರಾಟಿಗರು ಭೈರವನ ಆರಾಧನೆಯನ್ನು ಮೂರು ಕಾಲಘಟ್ಟದಲ್ಲಿ ಆಚರಿಸುವುದು ಕಂಡುಬರುತ್ತದೆ.

೧. **ವಾರ್ಷಿಕ ಕಾಲಾವಧಿ ಪೂಜೆ:** ಪ್ರತಿವರ್ಷ ಗೊತ್ತುಪಡಿಸಿದ ದಿನದಂದೂ ಈ ಪೂಜೆಯನ್ನು ನೆರವೇರಿಸುತ್ತಾರೆ. ಈ ಸಂದರ್ಭದಲ್ಲಿ ಭೈರವನನ್ನು ಕಾಶಿ ಕಾಳ ಭೈರವ ರೂಪವನ್ನು ಆಹ್ವಾನಿಸಿ ಪೂಜಿಸುತ್ತಾರೆ.

೨. **ಮರಾಟಿಗರ ಮೂಲ ಕುಟುಂಬದಲ್ಲಿ ಆರಾಧನೆ:** ಮರಾಟಿ ನಾಯ್ಕರಲ್ಲಿ ಪ್ರತಿಯೊಂದು ಕುಟುಂಬಕ್ಕೂ ತಮ್ಮ ಮನೆಯಲ್ಲಿ ಆರಾಧ್ಯ ದೇವತೆಯಾಗಿರುವಂತಹ ಅಂಬಾ ಭವಾನಿ, ತುಲಜಾ ಭವಾನಿ ಇತ್ಯಾದಿ ದೇವಿಯ ಗೊಂದೋಲು ಪೂಜೆ ಮಾಡಿಸಬೇಕೆಂಬುದು ಮನದಾಸೆಯಾಗಿರುತ್ತದೆ. ಅವರ ಕುಟುಂಬದ ಮೂಲ ಮನೆಯ (ಮೂಲ ಕುಟುಂಬ / ತರವಾಡು) ಜಮೀನಿನಲ್ಲಿ ಭೈರವನ ಬನವಿರುತ್ತದೆ. ಭೈರವನ ಬನವಿರುವ ಮನೆಯಲ್ಲಿ ಬನದ ಪಕ್ಕ ಸ್ವಲ್ಪ ದೂರದಲ್ಲಿ ಎರಡು ಕಲ್ಲು ಹಾಕಿ ಭೈರವನನ್ನು ಆಹ್ವಾನಿಸಿ ಮದ್ಯ ಶೇಂದಿ ಮಾಂಸಾದಿಗಳನ್ನು ಸಮರ್ಪಿಸಿ ಭೈರವನನ್ನು ತೃಪ್ತಿ ಪಡಿಸುತ್ತಾರೆ. ನಂತರ ಆ ಕಲ್ಲನ್ನು ತೆಗೆದು ಮುಂದಿನ ಕ್ರಿಯೆಗಳನ್ನು ಮುಂದುವರೆಸುತ್ತಾರೆ. ಈ ಸಂದರ್ಭದಲ್ಲಿ ಮರಾಟಿಗಳು ಭೈರವನನ್ನು ಮೂಡುಕಾಳ ಭೈರವ ರೂಪದಲ್ಲಿ ಆರಾಧಿಸುತ್ತಾರೆ.

೩. **ಕಷ್ಟಕಾರ್ಪಣ್ಯಗಳನ್ನು ತುರ್ತು ಹೋಗಲಾಡಿಸುವ** ಸಂದರ್ಭದಲ್ಲಿ ಅಗ್ನಿ ಭೈರವನ ರೂಪದಲ್ಲಿ ಆರಾಧನೆ: ಮರಾಟಿ ನಾಯ್ಕರ ಯಾವುದೋ ಒಂದು ಕುಟುಂಬಕ್ಕೆ ದೈಹಿಕ, ಮಾನಸಿಕ ಸಮಸ್ಯೆಗಳು ಎದುರಾದಾಗ ಅಥವಾ ಅವರ ಜಾನುವಾರುಗಳಿಗೆ ತೊಂದರೆ ಅನುಭವಿಸಿದಾಗ, ಕೃಷಿ ಬೆಳೆಗಳಿಗಾಗಲೀ, ಅತಿವೃಷ್ಟಿ, ಅನಾವೃಷ್ಟಿಗಳು ಎದುರಾದಾಗ ಮನೆಯ ಯಜಮಾನ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಭೈರವನನ್ನು ಪ್ರಾರ್ಥಿಸುತ್ತಾನೆ. ಈ ಸಂದರ್ಭದಲ್ಲಿ ತೆಂಗಿನಕಾಯಿಯನ್ನು ಭೈರವನ ಬನದ ಕಲ್ಲಿನಲ್ಲಿಟ್ಟು ಪ್ರಾರ್ಥಿಸಿ ನಂತರ ಕಲ್ಲಿಗೆ ಒಡೆಯುತ್ತಾರೆ. ೧೮ ವಾರ ಈ ರೀತಿ ಭೈರವನನ್ನು ಭಜಿಸಿ ಪ್ರಾರ್ಥಿಸಿದರೆ ಕಷ್ಟವನ್ನು ಪರಿಹರಿಸುತ್ತಾನೆ ಎಂಬ ನಂಬಿಕೆ ಮರಾಟಿಗಳಲ್ಲಿ ಇದೆ. ಮತ್ತು ಕಷ್ಟವನ್ನು ನೀಡಿದಾತನಿಗೆ ಅಥವಾ ಕಷ್ಟದ ದಾರಿ ತೋರಿಸಿದವನ್ನು ಶಿಕ್ಷೆಗೆ ಒಳಪಡಿಸಬೇಕೆಂದು ಭೈರವನಲ್ಲಿ ಪ್ರಾರ್ಥಿಸುತ್ತಾರೆ.

**ಭೈರವನ ಪೂಜಾ ಸಂದರ್ಭದ ವಿಧಿ ನಿಷೇದಗಳು**

ಭೈರವನ ಆಚರಣೆಯ ಸಂದರ್ಭದಲ್ಲಿ ಮರಾಟಿ ನಾಯ್ಕರು ಕೆಲವೊಂದು ವಿಧಿ ನಿಷೇಧಗಳನ್ನು ಇಂದಿಗೂ ಆಚರಿಸಿಕೊಂಡು ಬಂದಿರುವುದು ಕಂಡುಬಂದಿರುತ್ತದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳುವಳಿಕೆದಾರರು ಈ ಕೆಳಗಿನ ಮಾಹಿತಿಯನ್ನು ನೀಡಿರುವರು.

೧) ಭೈರವನ ಬನದ ಒಳಗೆ ಪುರುಷರಿಗೆ ಮಾತ್ರ ಪ್ರವೇಶವಿರುತ್ತದೆ. ಬನದ ಒಳಗೆ ಸ್ತ್ರೀಯರಿಗೆ ಪ್ರವೇಶ ನಿಷಿದ್ಧವಾಗಿರುತ್ತದೆ. ಮುಟ್ಟಿನ ಸಂದರ್ಭದಲ್ಲಂತೂ ಸ್ತ್ರೀಯರು ಬನದ ಹತ್ತಿರ ಸುಳಿಯುವಂತಿಲ್ಲ.

೨) ಭೈರವನ ಪೂಜೆಯಲ್ಲಿ ಸಮರ್ಪಿಸಲಾಗುತ್ತಿರುವ ಪ್ರಸಾದದ ಅಡುಗೆಯನ್ನು ಮರಾಟಿ ಜಾತಿಯ ಗಂಡಸರೇ ತಯಾರು ಮಾಡಬೇಕು.

೩) ಭೈರವನ ಬನದೊಳಗಿರುವ ಯಾವುದೇ ಗಿಡ, ಮರ, ಬಳ್ಳಿಗಳನ್ನು ಕಡಿಯುವಂತಿಲ್ಲ. ಒಂದು ವೇಳೆ ಕಡಿದರೆ ಆಪತ್ತು ಮತ್ತು ಕಷ್ಟಕಾರ್ಪಣ್ಯಗಳು ಕಟ್ಟಿಟ್ಟ ಬುತ್ತಿ ಎಂಬುದಾಗಿ ಹಿರಿಯ ಮರಾಟಿಗರ ನಂಬಿಕೆಯಾಗಿರುತ್ತದೆ.

೪) ಭೈರವನ ಬನದಲ್ಲಿ ಪೂಜೆಯಾದ ನಂತರ ಅಡುಗೆ ರೂಪದಲ್ಲಿದ್ದ ಪ್ರಸಾದವನ್ನು ಯಾವುದೇ ಕಾರಣಕ್ಕೂ ಮನೆಯೊಳಗೆ ಕೊಂಡು ಹೋಗುವಂತಿಲ್ಲ. ಹೊರಗಡೆಯೇ ಅವುಗಳನ್ನು ತಿಂದು ಮುಗಿಸಬೇಕು.

ಒಟ್ಟಿನಲ್ಲಿ ಭೈರವ ಆರಾಧನೆಯನ್ನು ಗಮನಿಸಿದಾಗ ಭೈರವನೋರ್ವ ಜನಪದ ದೈವವಾಗಿ ಕಂಡು ಬರುತ್ತಾನೆ. ಆತನು ಶೈವಾರಾಧನೆಯ ಪ್ರಾಚೀನ ರೂಪ. ಅನಾದಿ ಕಾಲದಿಂದಲೂ ಹುತ್ತಗಳು, ಬೃಹತ್ ಮರಗಳು, ಕಲ್ಲುಗಳೆಲ್ಲ ದೈವ ದೇವರುಗಳ ಕಲ್ಪನೆಯ ಬೆಳವಣಿಗೆಗೆ ಕಾರಣವಾಯಿತು. ಭೈರವನಿಗೆ ಆತನ ವಾಸಸ್ಥಾನವಾಗಿರುವ ಬನದಲ್ಲಿರುವ ಹಾಲು ಒಸರುವ ಮರಗಳಾದಂತಹ ಹಾಳೆಮರ ಮತ್ತು ಕಾಸರಿಕೆ ಮರಕ್ಕೆ ತನ್ನದೇ ಆದ ಮಹತ್ವ ಜನಪದ ಸಂಸ್ಕೃತಿಯಲ್ಲಿದೆ. ತುಳು ಜನಪದರಲ್ಲಿ ನಂಬಿಕೆಯಲ್ಲಿ ಕಾಸರಿಕೆ ಮರವು ದುಷ್ಟಶಕ್ತಿಗಳ ನಿಯಂತ್ರಿಸುವ ಮತ್ತು ನಿಗ್ರಹಿಸುವ ಸಾಮಾರ್ಥ್ಯವನ್ನು ಪಡೆದಿದೆ. ಅದೇ ರೀತಿ ಹಾಳೆ ಮರವು ಸಂಮೃದ್ಧಿಯ ಸಂಕೇತವಾಗಿದೆ. ಆದ್ದರಿಂದ ಭೈರವನು ಸಂಮೃದ್ಧಿ ಮತ್ತು ದುಷ್ಟಶಕ್ತಿಗಳನ್ನು ನಿಗ್ರಹಿಸುವ ಸಂಕೇತ ಬಲೀಂದ್ರನು ರಾಜನಾಗಿದ್ದು, ಕೃಷಿಯ ರಕ್ಷಕ, ಭೈರವನು ಜಮೀನಿನ ರಕ್ಷಕ ಮತ್ತು ಶಿವ ಪಾರ್ವತಿಯ ಕ್ಷೇತ್ರಗಳ ಕ್ಷೇತ್ರಪಾಲಕ ಎಂಬುದಾಗಿ ಜನಪದೀಯರ ನಂಬಿಕೆ. ಅಲ್ಲದೆ ಭೈರವನ ಆರಾಧನೆಯು ಕೃಷಿ ಸಂಸ್ಕೃತಿಯ ಒಂದು ಭಾಗವಾಗಿದೆ. ಪ್ರಕೃತಿಯನ್ನೊಳಗೊಂಡಿರುವ ಪ್ರಾಣಿ ಪಕ್ಷಿ ಮರಗಿಡ ಬಳ್ಳಿಗಳಲ್ಲಿ ಮಾನವನು ಒಂದು ರೀತಿಯಾದ ನಿಕಟ ಸಂಬಂಧವನ್ನು ಇಟ್ಟುಕೊಂಡು ತಾಂತ್ರಿಕ ಶಕ್ತಿಯನ್ನು ಒಲಿಸುವುದಕೋಸ್ಕರ ಮಾನವನು ಪ್ರಾಣಿಗಳನ್ನು ಉಪಯೋಗಿಸಿರಬಹುದು ಎಂಬುದಾಗಿ ಬಹುತೇಕ ಸಂಶೋಧಕರ ಅಭಿಪ್ರಾಯವಾಗಿದೆ. ಪ್ರಾಣಿ ಪಕ್ಷಿಗಳನ್ನು ಸಾಕಿ, ಸಲಹಿ, ಪೂಜಿಸಿ ಬಲಿಕೊಟ್ಟು ಕೊಂದ ಪಾಪವನ್ನು ತಿಂದು

ಪರಿಹಾರ ಎಂಬಂತೆ ಪ್ರಕೃತಿಗೆ ಸಮರ್ಪಿಸಿ ದುಷ್ಪಶಕ್ತಿಗಳನ್ನು ನಿಗ್ರಹಿಸಿ ಜೊತೆ ಜೊತೆಗೆ ಉತ್ತಮವಾದ ಕೃಷಿಯ ಫಲವನ್ನು ಪಡೆಯುವುದರ ಮೂಲಕ ಮಾನವನ ಬದುಕನ್ನು ಹಸನಗೊಳಿಸುವುದೇ ಈ ಆಚರಣೆಯ ತಾತ್ವಿಕತೆಯಾಗಿದೆ.

**ಪರಾಮರ್ಶನ ಗ್ರಂಥಗಳು**


೧. Dube SC. Tribal Heritage of India.
೨. ಡಾ. ಕೆ. ಎಂ. ಮೈತ್ರಿ, ೨೦೦೨, ಬುಡಕಟ್ಟು ಕುಲಕಸುಬು,
೩. ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ (ಪರಿಷ್ಕೃತ), ೨೦೦೧.
೪. ಕಿಟಲ್, ಕನ್ನಡ ಇಂಗ್ಲೀಷ್, ನಿಘಂಟು, ೧೮೯೪.
೫. ಡಾ. ಜಿ. ಸುಬ್ರಹ್ಮಣ್ಯ, ೨೦೧೬, ಸಾಮಾಜಿಕ ಸಮಸ್ಯೆಗಳು, ವಿ. ಆರ್. ಶರ್ಮ, ೧೯೯೮, ಕುಲ ಜನಾಂಗ ಮತ್ತು ಅಲ್ಪಸಂಖ್ಯಾತರ ಸಂಬಂಧಗಳು.
೬. ಸರ್ ಹರ್ಬರ್ಟ್ ರಿಸ್ಲೆ, ೧೯೦೧, ಭಾರತದ ಜನಗಣತಿ ವರದಿ, ಸಂ–೧.
೭. ಸರ್ ಜೆ. ಎ. ಬೇನ್ಸ್, ೧೮೯೧, ಭಾರತದ ಜನಗಣತಿ ವರದಿ, ಸಾಮಾನ್ಯ ವರದಿ, vol ೧.
೮. ಜೆ.ಎಚ್. ಹಟನ್, ೧೯೩೧, ಭಾರತದ ಜನಗಣತಿ ವರದಿ,
೯. ಡಾ. ಜಿ. ಸುಬ್ರಹ್ಮಣ್ಯ, ೨೦೧೬, ಸಾಮಾಜಿಕ ಸಮಸ್ಯೆಗಳು.
೧೦. Ghurye GS. The Aborigins So-Called and Their Future, Bombay Popular Book Depot 1943.
೧೧. Elwin V. The Baigas 1939.
೧೨. ಚ.ನ. ಶಂಕರರಾವ್, ೧೯೯೫, ಭಾರತೀಯ ಸಮಾಜ ಜೈ ಭಾರತ್ ಪ್ರಕಾಶ, ಮಂಗಳೂರು.
೧೩. ಡಾ. ಕೆ.ಎಂ. ಮೇತ್ರಿ, ೨೦೧೪, ಕರ್ನಾಟಕದ ಏಕೀಕರಣ ಮತ್ತು ಬುಡಕಟ್ಟುಗಳು, ಸಮಾಜ ಅಧ್ಯಯನ (ಸಂ) ಸಮಾಜ ವಿಜ್ಞಾನಗಳ ಸಂಶೋಧನೆ ಪತ್ರಿಕೆ ಸಂ–೧ ಸಂಚಿಕೆ–೧ ಜುಲೈ–ಡಿಸೆಂಬರ್.
೧೪. Krober AL. Anthropology, Race Language – culture Psychology 1948.
೧೫. Piddington (Ralph). Introduction to Social Anthropology Edinburgh, Oliver of Boy 1963, 2.
೧೬. ಚ.ನ. ಶಂಕರರಾವ್, ೧೯೯೫, ಭಾರತೀಯ ಸಮಾಜ ಜೈ ಭಾರತ್ ಪ್ರಕಾಶ.
೧೭. ಕೆ.ಎಂ. ಮೇತ್ರಿ, ೨೦೧೭, "ಸೂಕ್ಷ್ಮ ಆದಿವಾಸಿಗಳು",
೧೮. ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ಜನಸಂಖ್ಯಾ ಪಟ್ಟಿ, ೨೦೧೧.
೧೯. ಉತ್ತರ ಕನ್ನಡ, ದಕ್ಷಿಣ ಕನ್ನಡ ಉಡುಪಿ ಜಿಲ್ಲೆಯ ಪರಿಶಿಷ್ಟ ಪಂಗಡಗಳ ಜನಸಂಖ್ಯಾ ಪಟ್ಟಿ, ೨೦೧೧.